WEDNESDAY 11.06.2025 Pg.01

ಔಷಧೀಯ ಸಸ್ಯಗಳ ವ್ಯವಸಾಯಕ್ಕೆ ಉತ್ತೇಜನ: ಡಾ. ಶಾಲಿನಿ ಸೂಚನೆ

■ ವಿಕ ಸುದ್ದಿಲೋಕ ಬೆಂಗಳೂರು



''ಔಷಧೀಯ ಸಸ್ಯಗಳನ್ನು ಬೆಳೆಯುತ್ತಿರುವ ಬುಡಕಟ್ಟು ಜನಾಂಗವನ್ನು ಗುರುತಿಸಿ, ಔಷಧೀಯ ಸಸ್ಯಗಳ ವ್ಯವಸಾಯಕ್ಕೆ ಉತ್ತೇಜಿಸಿ,'' ಎಂದು ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ವಿಧಾನಸೌಧದಲ್ಲಿ ನಡೆದ ಔಷಧೀಯ ಸಸ್ಯಗಳ ಕುರಿತ ಸಭೆಯಲ್ಲಿ ಮಾತನಾಡಿ,''ಔಷಧೀಯ ಸಸ್ಯಗಳಿಂದ ತಯಾರಾಗುವ ಔಷಧಗಳಿಗೆ ಸೂಕ್ತ ಕಚ್ಚಾ ವಸ್ತು ಹಾಗೂ ಪ್ರಮಾಣೀಕರಣದ ಕೊರತೆ ಇದ್ದು, ಈ ಬಗ್ಗೆ ಗಮನಹರಿಸಬೇಕು,'' ಎಂದರು.

''ರಾಜ್ಯದಲ್ಲಿ ಬೆಳೆಯುವ ಪ್ರಮುಖ ಔಷಧೀಯ ಸಸ್ಯ ಹಾಗೂ ಅವುಗಳು ಲಭ್ಯವಿರುವ ಪ್ರದೇಶಗಳ ಪಟ್ಟಿ ನೀಡಬೇಕು,'' ಎಂದು ಸೂಚಿಸಿದರು. ''ಕೆಲವು ಔಷಧೀಯ ಸಸ್ಯಗಳು ಹಿಮಾಲಯ ಪ್ರದೇಶದ ತಪ್ಪಲು ಹಾಗೂ ಪಶ್ಚಿಮ ಘಟ್ಟಗಳಲ್ಲಿ ಲಭ್ಯವಿದ್ದು, ಅವುಗಳನ್ನು ನಮ್ಮ ರಾಜ್ಯದಲ್ಲಿ ಬೆಳೆಯಲು ಇರುವ ಅವಕಾಶಗಳನ್ನು ಪರಿಶೀಲಿಸುವುದು ಹಾಗೂ ಅದಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಲು ಕ್ರಮ ವಹಿಸಬೇಕು,'' ಎಂದು ಸಲಹೆ ನೀಡಿದರು.

''ಅರಣ್ಯ, ಆಯುಷ್, ಕಂದಾಯ, ಸಹಕಾರ ಇಲಾಖೆಗಳ ಸಮನ್ವಯತೆ ಸಾಧಿಸುವ ಮೂಲಕ ಔಷಧೀಯ ಸಸ್ಯಗಳ ಉತ್ಪನ್ನಕ್ಕೆ ಉತ್ತೇಜನ ನೀಡಲು ಕ್ರಮ ವಹಿಸಬೇಕು. ತೋಟಗಾರಿಕಾ ಇಲಾಖೆ ವತಿಯಿಂದ ಈಗಾಗಲೇ ಲಭ್ಯವಿರುವ ಔಷಧೀಯ ಸಸ್ಯಗಳ ಫಾರಂಗಳ ಪಟ್ಟಿಯನ್ನು ನೀಡಬೇಕು,'' ಎಂದು ನಿರ್ದೇಶನ ನೀಡಿದರು.

''ಮನರೇಗಾ ಯೋಜನೆಯಡಿ ಈಗಾಗಲೇ 5 ಎಕರೆಗಿಂತ ಕಡಿಮೆ ಭೂಮಿಯಲ್ಲಿ ವ್ಯವಸಾಯ ಮಾಡುತ್ತಿರುವ ಸಣ್ಣ ರೈತರಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಔಷಧೀಯ ಸಸ್ಯಗಳನ್ನು ಬೆಳೆಯುವ ರೈತರಿಗೂ ಒದಗಿಸಲಾಗುತ್ತಿದೆ. ಎನ್‌ಆರ್‌ಎಲ್‌ಎಂನಡಿ ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಹಿಳಾ ಸ್ವಸಹಾಯ ಸಂಘಗಳಲ್ಲಿ 34 ಸಾವಿರ ಬುಡಕಟ್ಟು ಮಹಿಳಾ ಗುಂಪುಗಳು ವನ್‌ಧನ್ ಕೇಂದ್ರಗಳ ಮೂಲಕ ಔಷಧೀಯ ಸಸ್ಯಗಳನ್ನು ಬೆಳೆಯುತ್ತಿದ್ದು, ಮಾರುಕಟ್ಟೆ ಸೌಲಭ್ಯ ಒದಗಿಸಿ ಬಲವರ್ಧನೆಗೊಳಿಸುವುದು ಹಾಗೂ ಇನ್ನೂ ಹೆಚ್ಚಿನ ಸ್ವಸಹಾಯ ಸಂಘಗಳ ಸದಸ್ಯರನ್ನು ಈ ಚಟುವಟಿಕೆಯಲ್ಲಿ ಬಳಸಿಕೊಳ್ಳಬಹುದಾಗಿರುತ್ತದೆ,'' ಎಂದು ತಿಳಿಸಿದರು.

VijayaKarnataka Pg.03

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಕನ್ನಡದಲ್ಲಿ ಕೃಷಿ ಬರವಣಿಗೆ ಪ್ರೋತ್ಸಾಹಿಸಲು 'ಕನ್ನಡ ಕೃಷಿ ಪುಸ್ತಕ ಪ್ರಶಸ್ತಿ' ನೀಡುತ್ತಿದ್ದು, 2024ರಲ್ಲಿ ಪ್ರಥಮ ಮುದ್ರಣ ಕಂಡಿರುವ ಪುಸ್ತಕಗಳನ್ನು ಲೇಖಕರಿಂದ ಆಹ್ವಾನಿಸಿದೆ. ಪ್ರಶಸ್ತಿಯು 10 ಸಾವಿರ ರೂ. ನಗದು ಮತ್ತು ಫಲಕ ಒಳಗೊಂಡಿರಲಿದೆ.

■ **30ರೊಳಗೆ ಕೃತಿಯ 3 ಪ್ರತಿಗಳ ಕಳುಹಿಸಿ**

ಲೇಖಕರು ನಿಗದಿತ ನಮೂನೆಯಲ್ಲಿ ಪ್ರಶಸ್ತಿಗೆ ಸಲ್ಲಿಸುವ ಮೂರು ಪ್ರತಿಗಳನ್ನು ಸ್ವವಿವರಗಳೊಂದಿಗೆ 30ರೊಳಗೆ ಕಳುಹಿಸಬೇಕು. ವಿಳಾಸ: ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಜಿಕೆವಿಕೆ, ಬೆಂಗಳೂರು- 560 065. ವೆಬ್‌ಸೈಟ್: http://uasbangalore.edu.in ಇ-ಮೇಲ್: kannada.uas@gmail.com ದೂ: 080- 2333 0153 ಸಂಪರ್ಕಿಸಬಹುದು.

Vijayavani Pg.02

ಮಣ್ಣು ಆರೋಗ್ಯಕ್ಕೆ ಮಾರಕ ರಾಸಾಯನಿಕ

ಇಳುವರಿ ಕಡಿಮೆಯಾದರೂ ಪರವಾಗಿಲ್ಲ ರಾಸಾಯನಿಕಗಳನ್ನು ಕಡಿಮೆ ಬಳಸಿ ಮಣ್ಣನ್ನು ಫಲವತ್ತಾಗಿರಿಸಬೇಕು ಎಂಬುದು ಪ್ರತಿಯೊಬ್ಬರ ಧ್ಯೇಯವಾಗಬೇಕು. ಕೃಷಿಯಲ್ಲಿ ಸುಸ್ಥಿರ ರಸಗೊಬ್ಬರ ಪದ್ಧತಿಯಿಂದ ಮಾತ್ರ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದಾಗಿದೆ.

ಕೃಷಿ ಪ್ರಧಾನವಾದ ಭಾರತದಲ್ಲಿ ಅತಿಯಾದ ರಸಗೊಬ್ಬರಗಳ ಬಳಕೆಯಿಂದಾಗಿ ಪ್ರಸ್ತುತ ಮಣ್ಣಿನ ಫಲವತ್ತತೆಯು ದಿನದಿಂದ ದಿನಕ್ಕೆ ಹಾಳಾಗುತ್ತಿರುವುದಲ್ಲದೆ ಇಳುವರಿ ಸಹ ಕುಂಠಿತಗೊಳ್ಳುತ್ತಿದೆ. ರಾಸಾಯನಿಕಗಳಿಂದಾಗಿ ಹದಗೆಟ್ಟಿರುವ ಮಣ್ಣಿನಲ್ಲಿ ಬೆಳೆದ ಆಹಾರ ಧಾನ್ಯಗಳನ್ನು ದಿನನಿತ್ಯ ಸೇವಿಸುವುದರಿಂದ ಮನುಕುಲದ ಆರೋಗ್ಯವು ಹಾಳಾಗುತ್ತಿದೆ. ಹೆಚ್ಚು ರಸಗೊಬ್ಬರ, ಕಳೆನಾಶಕ ಮತ್ತು ಕೀಟನಾಶಕಗಳನ್ನು ಬಳಸುವುದರಿಂದ ಇಳುವರಿಯು ಹೆಚ್ಚಾಗುತ್ತದೆ ಎಂಬುದು ರೈತರ ತಪ್ಪು ತಿಳಿವಳಿಕೆಯಾಗಿದೆ. ಹಾಗಾದರೆ ಕೃಷಿಯಲ್ಲಿ ರಾಸಾಯನಿಕಗಳನ್ನು ಬಳಸಬಾರದೆ? ಖಂಡಿತವಾಗಿ ಬಳಸಬೇಕು. ಆದರೆ ಶಿಫಾರಸ್ ಪ್ರಮಾಣವನ್ನು ಮೀರದಂತೆ ಎಚ್ಚರವಹಿಸಬೇಕು.

ರಾಸಾಯನಿಕಗಳಿಂದಾಗುವ ದುಷ್ಪರಿಣಾಮಗಳು



ಎಲೆಯ ಅಂಚುಗಳು ಕಂದು ಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣಿಸಿಕೊಳ್ಳುತ್ತವೆ. ಕರಗುವ ಲವಣಗಳು ಹೆಚ್ಚಾಗಿ ಸಸ್ಯಗಳು ಸೊರಗಿ ಬೆಳವಣಿಗೆಯು ಕುಂಠಿತವಾಗುತ್ತದೆ. ಬೆಳೆಗೆ ಕೊಟ್ಟ ಸಾವಯವ ಗೊಬ್ಬರ ನಾಶವಾಗುತ್ತದೆ. ಮಣ್ಣಿನ ಗುಣಮಟ್ಟ, ನೀರಾವರಿ ಅಭ್ಯಾಸಗಳು, ಉಪ್ಪಿನ ಮಟ್ಟ ಮತ್ತು ನಿರ್ದಿಷ್ಟ ಸಸ್ಯಗಳ ಸೂಕ್ಷ್ಮತೆಯಂತಹ ಅಂಶಗಳು ಬದಲಾವಣೆಯಾಗುತ್ತವೆ. ಮಣ್ಣಿನ ಫಲವತ್ತತೆಯು ಹಾಳಾಗುತ್ತದೆ. ವಿವಿಧ ಹಂತದಲ್ಲಿ ಬೆಳೆಯು ಆರೋಗ್ಯಕರವಾಗಿ ಬೆಳೆಯುವುದಿಲ್ಲ. ಇಳುವರಿಯು ಕುಂಠಿತವಾಗುತ್ತದೆ. ಮಣ್ಣು ಗಟ್ಟಿಯಾಗಿ ಬೇಸಾಯ ಕ್ರಮಗಳಿಗೆ ತೊಂದರೆ ಮತ್ತು ಸಸ್ಯಗಳ ಬೇರುಗಳ ಬೆಳವಣಿಗೆಗೆ ಅಡಚಣೆಯನ್ನುಂಟು ಮಾಡುತ್ತದೆ. ಕೆಲವೊಮ್ಮೆ ಅರಿವಿಗೆ ಬಾರದೆ ಮಣ್ಣಿನಲ್ಲಿ ಈಗಾಗಲೆ ಲಭ್ಯವಿರುವ ರಾಸಾಯನಿಕಗಳನ್ನು ಮರಳಿ ಬಳಸುವುದರಿಂದ ಆರ್ಥಿಕವಾಗಿ ನಷ್ಟವುಂಟಾಗುತ್ತದೆ.

ಆಹಾರಧಾನ್ಯಗಳು ರಾಸಾಯನಿಕಯುಕ್ತವಾಗುತ್ತವೆ. ಇಂತಹ ಆಹಾರಧಾನ್ಯಗಳನ್ನು ಸೇವಿಸುವುದರಿಂದ ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗಳು ಹರಡುವ ಅಪಾಯವಿರುತ್ತದೆ. ರಾಸಾಯನಿಕಗಳು ಮೇಲ್ಪೈ ಹರಿವಿನ ಮೂಲಕ ಜಲಮೂಲಗಳಿಗೆ ಸೇರ್ಪಡೆಯಾಗಿ ಜಲಮಾಲಿನ್ಯ ಮತ್ತು ಅಂತರ್ಜಲಮಾಲಿನ್ಯವುಂಟಾಗುತ್ತದೆ.

ಜಲಮೂಲಗಳಲ್ಲಿ ಪಾಚಿ ಮತ್ತು ಜಲಸಸ್ಯಗಳ ಬೆಳವಣಿಗೆಯಾಗುತ್ತದೆ. ನೀರಿನಲ್ಲಿ ಆಮ್ಲಜನಕವು ಕಡಿಮೆಯಾಗಿ ಮಣ್ಣು, ಜಲಚರಗಳಿಗೆ ಹಾನಿಯಾಗುತ್ತದೆ. ಪೌಷ್ಟಿಕಾಂಶಗಳು ಸೋರಿಕೆಯಾಗುವುದರಿಂದ ಕುಡಿಯುವ ನೀರಿನ ಗುಣಮಟ್ಟವು ಬದಲಾವಣೆಯಾಗಿ ಮಾನವನ ಆರೋಗ್ಯಕ್ಕೆ ಅಪಾಯವಾಗುತ್ತದೆ.

ಮುಂಜಾಗ್ರತಾ ಕ್ರಮಗಳು

ಕಡ್ಡಾಯವಾಗಿ ಮಣ್ಣು ಪರೀಕ್ಷೆಯ ಆಧಾರದ ಮೇಲೆ ರಾಸಾಯನಿಕಗಳನ್ನು ಬಳಸಬೇಕು. ಫಸಲು ಕಟಾವಿನ ನಂತರದ ಬೆಳೆಯುಳಿಕೆಗಳನ್ನು ಮಣ್ಣಿನಲ್ಲಿ ಸೇರಿಸಬೇಕು. ಇದರಿಂದ ಮಣ್ಣಿನಲ್ಲಿ ಸಾವಯವ ಇಂಗಾಲದ ಪ್ರಮಾಣವು ಹೆಚ್ಚಾಗುತ್ತದೆ. ನಿಧಾನವಾಗಿ ಬಿಡುಗಡೆಯಾಗುವಂತಹ ರಸಗೊಬ್ಬರಗಳನ್ನು ಬಳಸುವುದರಿಂದ ಬೆಳೆಗೆ ತಗುಲುವ ಸಾಮೂಹಿಕ ಸಮಸ್ಯೆಗಳನ್ನು ನಿಯಂತ್ರಿಸಬಹುದು. ಪ್ರತಿವರ್ಷ ಮಣ್ಣಿನ ಮೇಲೆ ಕೆಲವು ಸೆಂಟಿಮೀಟರಗಳಷ್ಟಾದರೂ ಜೈವಿಕ, ಸಾವಯವ, ಕಾಂಪೋಷ್ಟ ಗೊಬ್ಬರಗಳು ಮತ್ತು ಸಗಣಿ ಹಾಗೂ ಗಂಜಲನ್ನು ನಿಯಮಿತವಾಗಿ ಹಾಕುತ್ತಿರಬೇಕು.

ಪ್ರಸಕ್ತ ಕೃತಕ ಬುದ್ಧಿಮತ್ತೆ, ಉಪಗ್ರಹ ಮತ್ತು ಜಿ.ಪಿ.ಎಸ್ ತಾಂತ್ರಿಕತೆಗಳು ಲಭ್ಯವಿದ್ದು, ಇವುಗಳನ್ನು ಅಳವಡಿಸಿಕೊಂಡು ರಸಗೊಬ್ಬರ ಬಳಕೆಯನ್ನು ನಿಯಂತ್ರಿಸಬೇಕು. ದೀರ್ಘಾವಧಿ ಬೆಳೆಯ ನಂತರ ಕಡ್ಡಾಯವಾಗಿ ಮಾಗಿ ಉಳುಮೆ ಕೈಗೊಳ್ಳಬೇಕು. ರಾಸಾಯನಿಕಗಳನ್ನು ಲೇಬಲ್ ಮೇಲಿನ ನಿರ್ದೇಶನಗಳ ಪ್ರಕಾರದಂತೆ ಬಳಸಬೇಕು. ಹರಳಿನ ರಸಗೊಬ್ಬರಗಳನ್ನು ಶುಷ್ಕ ಹಾಗೂ ಶಾಖ ವಾತಾವರಣದಲ್ಲಿ ಬಳಸಬಾರದು. ಇದರಿಂದ ರಾಸಾಯನಿಕಗಳ ಮತ್ತು ಸಸ್ಯಗಳ ಅನಗತ್ಯ ನಾಶವನ್ನು ತಡೆಯಬಹುದು.

ಸಮ್ಮಿಶ್ರ ಬೆಳೆಗಳು ಹೆಚ್ಚುವರಿ ರಸಗೊಬ್ಬರಗಳನ್ನು ಹೀರಿಕೊಂಡು ಮಣ್ಣಿನ ರಚನೆ ಮತ್ತು ಆರೋಗ್ಯವನ್ನು ಸುಧಾರಿಸುತ್ತವೆಯಲ್ಲದೆ ಬೋನಸ್ ಆದಾಯವನ್ನು ನೀಡುತ್ತವೆ. ಸಸ್ಯ ನಾಶವಾಗುವಿಕೆ ಅಥವಾ ಬೆಳವಣಿಗೆಗೆ ತೊಡಕಾಗುವುದನ್ನು ತಡೆಯಲು ರಾಸಾಯನಿಕಗಳನ್ನು ಉಪಯೋಗಿಸಿದ ತಕ್ಷಣವೇ ನೀರುಣಿಸಬೇಕು.

ಇಳುವರಿ ಕಡಿಮೆಯಾದರೂ ಪರವಾಗಿಲ್ಲ ರಾಸಾಯನಿಕಗಳನ್ನು ಕಡಿಮೆ ಬಳಸಿ ಮಣ್ಣನ್ನು ಫಲವತ್ತಾಗಿರಿಸಬೇಕು ಎಂಬುದು ಪ್ರತಿಯೊಬ್ಬರ ಧ್ಯೇಯವಾಗಬೇಕು. ಕೃಷಿಯಲ್ಲಿ ಸುಸ್ಥಿರ ರಸಗೊಬ್ಬರ ಪದ್ಧತಿಯಿಂದ ಮಾತ್ರ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಳ್ಳಬಹುದಾಗಿದೆ. ಸರಕಾರವು ಇದನ್ನು ಗಂಭೀರವಾಗಿ ಪರಿಗಣಿಸಬೇಕು.

■ ಐಸವರಾಜ ಶಿವಪ್ಪ ನಿರಗಾಂವಿ
ಕೃಷಿ ತಜ್ಞರು ಹಾಗೂ ಸಹಾಯಕ ಮಹಾ ಪ್ರಬಂಧಕರು-ಕೃಷಿ ವಿಭಾಗ ಜಮಖಂಡಿ ಶುಗರ್ಸ್

SamyukthaKarnataka Pg.10

Mango Rates Fall on High UP Output

Cheaper Fruit

Dasehri mango prices fell to ₹40-45 from ₹60

Prices in WB fell to ₹45-50 from ₹80

*(PER KG)

Totapuri mango farmers facing losses due to low prices, delayed procurement by pulp factories

MANGO PRODUCTION IN UP

CURRENT ESTIMATE: **35 lakh metric tonnes**

LAST YEAR: **25 lakh metric tonnes**



YOGEESH

Sutanuka Ghosal

Kolkata: Mango prices have plunged up to a third year-on-year in Uttar Pradesh (UP), the largest producer of the fruit in the country, amid increased supply, said growers and traders.

Prices of the popular Dasehri variety, for instance, have fallen to ₹40-45 per kg from ₹60 per kg a year ago.

"This year the mango production in UP is estimated to be around 35 lakh metric tonnes, as compared to 25 lakh metric tonnes last year. There was 100% flowering of the mango trees, which indicates that the production will be good," said S Insram Ali, president of the Mango Growers Association of India. While higher production is one of the reasons for the drop in prices, Ali said the farmers also harvested mangoes early to avoid damage from the early monsoon, as predicted by the IMD.

The weather department had indicated higher than normal monsoon this year in the June-September period.

"It is unlikely that prices will go up in the coming weeks," Ali said.

In southern India, Totapuri mangoes, which are grown in the Tirupati and Chittoor districts of Andhra Pradesh, have seen a drastic fall in prices as mango pulp makers have not purchased mangoes from farmers.